ವಿಜಯ ಕರ್ನಾಟಕ

ಗುರುವಾರ,6 ಜೂನ್ 2024

ಕೃಷಿ ವಿವಿ ಆವರಣದಲ್ಲಿ ಪರಿಸರ ದಿನಾಚರಣೆ

ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ಅರಣ್ಯ ಹಾಗೂ ಪರಿಸರ ವಿಜ್ಞಾನ ವಿಭಾಗ ಮತ್ತು ಹೆಬ್ಬಾಳದ ಯುಎಎಸ್ ಕ್ಯಾಂಪಸ್ ಶಾಲೆಯ ಸಂಯುಕ್ತ ಆಶ್ರಯದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಬೆಂಗಳೂರು ಕೃಷಿ ವಿವಿ ಕುಲಪತಿ ಡಾ. ಎಸ್.ವಿ.ಸುರೇಶ ಅವರು ಗಿಡ ನೆಡುವುದರ ಮೂಲಕ ಪರಿಸರ ದಿನಾಚರಣೆಗೆ ಚಾಲನೆ ನೀಡಿದರು. ಈ ವೇಳೆ ಮಾತನಾಡಿದ ಅವರು, ''ಹವಾಮಾನ ವೈಪರೀತ್ಯವನ್ನು ತಪ್ಪಿಸಲು ಪರಿಸರವನ್ನು ಕಾಪಾಡಿ, ಉಳಿಸಿಕೊಂಡು ಹೋಗುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಬೇಕು,'' ಎಂದು ಮನವಿ ಮಾಡಿದರು.

ಕನ್ನಡಪ್ರಭ

ಗುರುವಾರ 06.06.2024

ಜಾಗೃತಿ | ಹೆಬ್ಬಾಳದ ಜಿಕೆವಿಕೆಯಲ್ಲಿ ವಿಶ್ವ ಪರಿಸರ ದಿನಾಚರಣೆ

ಪರಿಸರ ಉಳಿಸಿ, ಬೆಳೆಸುವುದು ಕರ್ತವ್ಯವಾಗಲಿ: ಡಾ.ಸುರೇಶ್

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಹೆಬ್ಬಾಳದ ಜಿಕೆವಿಕೆಯಲ್ಲಿ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಕುಲಪತಿ ಡಾ.ಎಸ್.ವಿ.ಸುರೇಶ ಅವರು ಸಸಿ ನೆಟ್ಟು ನೀರೆರೆದರು.

• **ಕನ್ನಡಪ್ರಭವಾರ್ತೆ** ಬೆಂಗಳೂರು

ಹವಾಮಾನ ವೈಪರೀತ್ಯದ ಹಿನ್ನೆಲೆಯಲ್ಲಿ ಪರಿಸರವನ್ನು ಉಳಿಸಿ, ಬೆಳೆಸಿಕೊಂಡು ಹೋಗುವುದು ಪ್ರತಿಯೊಬ್ಬ ನಾಗರಿಕರ ಕರ್ತವ್ಯವಾಗಬೇಕು ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ವಿ.ಸುರೇಶ ಅಭಿಪ್ರಾಯಪಟ್ಟರು.

ಹೆಬ್ಬಾಳದ ಜಿಕೆವಿಕೆಯಲ್ಲಿ ವಿವಿ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪರಿಸರವನ್ನು ಉಳಿಸಿ, ಬೆಳೆಸಿಕೊಂಡು ಹೋಗುವುದು ಪ್ರತಿಯೊಬ್ಬ ನಾಗರಿಕರ ಕರ್ತವ್ಯವಾಗಬೇಕು. ಹವಾಮಾನ ವೈಪರೀತ್ಯವನ್ನು ಕಡಿಮೆ ಮಾಡಲು ಪರಿಸರವನ್ನು ಕಾಪಾಡಬೇಕಿದೆ. ಪ್ರತಿಯೊಬ್ಬರೂ ಸಸಿಗಳನ್ನು ನೆಟ್ಟು ಪೋಷಿಸಿ ಪರಿಸರ ಸಂರಕ್ಷಿಸಬೇಕು ಎಂದು ಕರೆ ನೀಡಿದರು.

ಪರಿಸರ ಸಂರಕ್ಷಣೆಗೆ ಶಿಕ್ಷಕರು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಿ,ಪರಿಸರ ಜಾಗೃತಿ ಮೂಡಿಸಬೇಕು ಎಂದರು. ಬಿಬಿಎಂಪಿಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಬಿ.ಜಿ.ಎಲ್.ಸ್ವಾಮಿ, ಕೃಷಿ ವಿವಿ ಶಿಕ್ಷಣ ನಿರ್ದೇಶಕ ಡಾ.ಕೆ.ಸಿ.ನಾರಾಯಣ ಸ್ವಾಮಿ ಹಾಜರಿದ್ದರು.

ಉದಯವಾಣಿ
ಗುರುವಾರ, ಜೂನ್ 6, 2024

ಶಾಲೆಯಲ್ಲಿ ಪ್ರತಿದಿನ 1 ಗಂಟೆ ಕಾಲ ಪರಿಸರ ಪಾಠ ಅಗತ್ಯ: ಡಾ। ಸುರೇಶ್

ಪರಿಸರ ಜಾಗೃತಿ ಬೆಳೆಸಿಕೊಳ್ಳಿ: ಕುಲಪತಿ । ಕೃಷಿ ವಿವಿಯಲ್ಲಿ ಪರಿಸರ ದಿನಾಚರಣೆ

ಕೃಷಿ ವಿವಿಯಲ್ಲಿ ಯುಎಎಸ್ ಕ್ಯಾಂಪಸ್ ಶಾಲೆಯ ಸಂಯುಕ್ತಾಶ್ರಯದಲ್ಲಿ ವಿಶ್ವ ಪರಿಸರ ದಿನವನ್ನು ಆಚರಿಸಲಾಯಿತು.

■ ಉದಯವಾಣಿ ಸಮಾಚಾರ

ಬೆಂಗಳೂರು: ಹವಾಮಾನ ವೈಪರೀತ್ಯವನ್ನು ಕಡಿಮೆ ಮಾಡಲು ಪರಿಸರವನ್ನು ಕಾಪಾಡಿ, ಉಳಿಸಿ ಬೆಳೆಸಿಕೊಂಡು ಹೋಗುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಬೇಕು ಎಂದು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ. ಎಸ್.ವಿ. ಸುರೇಶ್ ಅಭಿಪ್ರಾಯಪಟ್ಟರು.

ನಗರದ ಕೃಷಿ ವಿವಿಯ ಅರಣ್ಯ ಹಾಗೂ ಪರಿಸರ ವಿಜ್ಞಾನ ವಿಭಾಗ ಮತ್ತು ಹೆಬ್ಬಾಳದ ಯುಎಎಸ್ ಕ್ಯಾಂಪಸ್ ಶಾಲೆಯ ಸಂಯುಕ್ತಾಶ್ರಯದಲ್ಲಿ ಬುಧವಾರ ಹಮ್ಮಿಕೊಂಡಿದ್ದ 'ವಿಶ್ವ ಪರಿಸರ ದಿನಾಚರಣೆ -2024' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶಾಲೆಯಲ್ಲಿ ಪ್ರತಿದಿನ 1 ಗಂಟೆ ಪರಿಸರವನ್ನು ಉಳಿಸುವ ಮತ್ತು ನಮ್ಮ ಸುತ್ತಮುತ್ತಲಿರುವ ಪರಿಸರವನ್ನು ಹೇಗೆ ಕಾಪಾಡಿಕೊಳ್ಳಬೇಕೆಂದು ಶಾಲಾ ಶಿಕ್ಷಕರು ಪಾಠಮಾಡುವುದು ಅಗತ್ಯವಾಗಿದೆ. ಇದನ್ನು ವಿದ್ಯಾರ್ಥಿಗಳು ಅರಿತುಕೊಂಡು ತಮ್ಮ ಮನೆ ಮತ್ತು ತಮ್ಮ ಸುತ್ತಮುತ್ತಲಿರುವ ಜನಗಳಿಗೂ ಸಹ ಪರಿಸರದ ಅರಿವನ್ನು ಮೂಡಿಸಬೇಕು ಎಂದು ತಿಳಿಸಿದರು.

ಇದೇ ವೇಳೆ ಮಾತನಾಡಿದ ಬಿಬಿಎಂಪಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಬಿ.ಎಲ್.ಜಿ. ಸ್ವಾಮಿ, ನಮ್ಮ ದೇಶದಲ್ಲಿ ಅಧಿಕ ಜನ ಸಂಖ್ಯೆಯಿದ್ದರೂ ಸಹ ನಾವು ನಮ್ಮ ಸುತ್ತಮುತ್ತಲಿರುವ ಪರಿಸರವನ್ನು ಕಾಪಾಡಿಕೊಂಡು ಅಭಿವೃದ್ಧಿ ಕಡೆ ಸಾಗುತ್ತಾ, ಇಂತಹ ಕಾರ್ಯಕ್ರಮಗಳನ್ನು ಆಚರಿಸಿಕೊಂಡು ಬರುತ್ತಿದ್ದೇವೆ. ಪರಿಸರ ಉಳಿಸುವುದಕ್ಕೆ ಶಾಲಾಮಕ್ಕಳ ಕೊಡುಗೆ ಬಹಳ ಮುಖ್ಯವಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯು ಸಂಜೆ ಮನೆಗೆ ಹೋಗುವಾಗ ತಾವು ತಂದಿರುವ ನೀರಿನ ಬಾಟಲಿನಲ್ಲಿ ಉಳಿದ ಭಾಗವನ್ನು ಪೋಲು ಮಾಡದೆ, ಆ ನೀರನ್ನು ಮರಗಳಿಗೆ ಹಾಕುವುದರಿಂದ ಸಹ ಪರಿಸರವನ್ನು ಸಂರಕ್ಷಿಸಿದಂತಾಗುತ್ತದೆ ಎಂದು ಸಲಹೆ ನೀಡಿದರು. ಈ ಸಂದರ್ಭದಲ್ಲಿ ಜಿಕೆವಿಕೆ ಕೃಷಿ ವಿಶ್ವವಿದ್ಯಾಲಯದ ಶಿಕ್ಷಣ ನಿರ್ದೇಶಕ ಡಾ. ಕೆ.ಸಿ. ನಾರಾಯಣಸ್ವಾಮಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಜನಪರವಿಯ ಸಾರಥಿ
ವಾರ್ತಾ ಭಾರತಿ
Jun 6, 2024

ಪರಿಸರವನ್ನು ಮುಂದಿನ ಪೀಳಿಗೆಗೂ ಉಳಿಸಿ: ಡಾ.ಸುರೇಶ್

ಬೆಂಗಳೂರು, ಜೂ.5: ಪರಿಸರ ಕಾಪಾಡುವುದು ಮತ್ತು ಬೆಳೆಸುವುದು ಸಮಾಜದ ಪ್ರತಿಯೊಬ್ಬ ನಾಗರಿಕರ ಕರ್ತವ್ಯವಾಗಬೇಕು ಎಂದು ಕೃಷಿ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎಸ್.ವಿ.ಸುರೇಶ್ ಹೇಳಿದ್ದಾರೆ.

ಬುಧವಾರ ನಗರದ ಕೃಷಿ ವಿವಿಯಲ್ಲಿ 'ಬೆಂಗಳೂರಿನ ಅರಣ್ಯ ಹಾಗೂ ಪರಿಸರ ವಿಜ್ಞಾನ ವಿಭಾಗ ಮತ್ತು ಯುಎಎಸ್ ಕ್ಯಾಪಸ್ ಶಾಲೆ' ವತಿಯಿಂದ ಹಮ್ಮಿಕೊಂಡಿದ್ದ 'ವಿಶ್ವ ಪರಿಸರ ದಿನಾಚರಣೆ'ಯ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಉಂಟಾಗಿರುವ ಹವಾಮಾನ ವೈಪರಿತ್ಯವನ್ನು ಕಡಿಮೆ ಮಾಡಲು ಪರಿಸರವನ್ನು ಕಾಪಾಡಿ, ಮುಂದಿನ ಪೀಳಿಗೆಗೆ ಸ್ವಚ್ಛವಾದ ಪರಿಸರ ನಿರ್ಮಿಸಿಕೊಡಬೇಕಿದೆ ಎಂದು ಹೇಳಿದರು.

ಶಾಲಾ ಶಿಕ್ಷಕರು ಪ್ರತಿ ತರಗತಿಯಲ್ಲಿಯೂ ಒಂದು ಗಂಟೆ ಪರಿಸರ ಉಳಿಸುವುದು ನಮ್ಮ ಕರ್ತವ್ಯ ಮತ್ತು ನಮ್ಮ ಸುತ್ತಮುತ್ತಲಿರುವ ಪರಿಸರ ಹೇಗೆ ಕಾಪಾಡಿಕೊಳ್ಳಬೇಕೆಂದು ಪಾಠ ಮಾಡುವುದು ಅವಶ್ಯಕ. ಇದನ್ನು ವಿದ್ಯಾರ್ಥಿಗಳು ಅರಿತುಕೊಂಡು ತಮ್ಮ ಮನೆ ಮತ್ತು ಸುತ್ತಮುತ್ತಲಿರುವ ಜನಗಳಿಗೂ ಪರಿಸರದ ಅರಿವನ್ನು ಮೂಡಿಸಬೇಕು ಎಂದು ಅವರು ಕರೆ ನೀಡಿದರು.

ನಗರದ ಮಕ್ಕಳಲ್ಲಿ ಅವರಿಗೆ ಗೊತ್ತಿಲ್ಲದ ಕೆಲವು ಕಾಯಿಲೆಗಳು ಬರುತ್ತಿರುವುದಕ್ಕೆ ಕಾರಣ ಅವರಲ್ಲಿ ರೋಗ ನಿರೋಧಕ ಶಕ್ತಿ ಕಡಿಮೆಯಾಗಿರುವುದು. ನಮ್ಮ ದೇಶದಲ್ಲಿ ಅಧಿಕ ಜನ ಸಂಖ್ಯೆಯಿದ್ದರೂ ನಾವು ನಮ್ಮ ಸುತ್ತಮುತ್ತಲಿರುವ ಪರಿಸರವನ್ನು ಕಾಪಾಡಿಕೊಂಡು ಅಭಿವೃದ್ಧಿ ಕಡೆ ಸಾಗುತ್ತಾ ಇಂತಹ ಆಚರಣೆಗಳನ್ನು ಆಚರಿಸಿಕೊಂಡು ಬರುತ್ತಿದ್ದೇವೆ. ಭಾರತದಲ್ಲಿ ಪರಿಸರ ಉಳಿಸುವುದಕ್ಕೆ ಶಾಲಾ ಮಕ್ಕಳ ಕೊಡುಗೆ ಬಹಳ ಮುಖ್ಯವಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯು ಸಂಜೆ ಮನೆಗೆ ಹೋಗುವಾಗ ತಾವು ತಂದಿರುವ ನೀರಿನಲ್ಲಿ ಉಳಿದ ನೀರನ್ನು ಪೋಲು ಮಾಡದೆ ಮರಗಳಿಗೆ ಹಾಕುವುದರಿಂದ ಪರಿಸರ ಸಂರಕ್ಷಿಸಿದಂತಾಗುತ್ತದೆ ಎಂದು ಸುರೇಶ್ ತಿಳಿಸಿದರು.

ಉಪ ಅರಣ್ಯ ಸಂಪಕ್ಷಣಾಧಿಕಾರಿ, ಬಿ.ಎಲ್.ಜಿ.ಸ್ವಾಮಿ ಹಾಗೂ ಶಿಕ್ಷಣ ನಿರ್ದೇಶಕ ಡಾ.ಕೆ.ಸಿ.ನಾರಾಯಣಸ್ವಾಮಿ ಭಾಗವಹಿಸಿದ್ದರು.

KannadaPrabha Pg.04

ಪರಿಸರ ಉಳಿಸಿ, ಬೆಳೆಸುವುದು ಕರ್ತವ್ಯವಾಗಲಿ: ಡಾ.ಸುರೇಶ್

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಹೆಬ್ಬಾಳದ ಜಿಕೆವಿಕೆಯಲ್ಲಿ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಕುಲಪತಿ ಡಾ.ಎಸ್.ವಿ.ಸುರೇಶ ಅವರು ಸಸಿ ನೆಟ್ಟು ನೀರೆರೆದರು.

• **ಕನ್ನಡಪ್ರಭವಾರ್ತೆ** ಬೆಂಗಳೂರು

ಹವಾಮಾನ ವೈಪರೀತ್ಯದ ಹಿನ್ನೆಲೆಯಲ್ಲಿ ಪರಿಸರವನ್ನು ಉಳಿಸಿ, ಬೆಳೆಸಿಕೊಂಡು ಹೋಗುವುದು ಪ್ರತಿಯೊಬ್ಬ ನಾಗರಿಕರ ಕರ್ತವ್ಯವಾಗಬೇಕು ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ವಿ.ಸುರೇಶ ಅಭಿಪ್ರಾಯಪಟ್ಟರು.

ಹೆಬ್ಬಾಳದ ಜಿಕೆವಿಕೆಯಲ್ಲಿ ವಿವಿ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪರಿಸರವನ್ನು ಉಳಿಸಿ, ಬೆಳೆಸಿಕೊಂಡು ಹೋಗುವುದು ಪ್ರತಿಯೊಬ್ಬ ನಾಗರಿಕರ ಕರ್ತವ್ಯವಾಗಬೇಕು. ಹವಾಮಾನ ವೈಪರೀತ್ಯವನ್ನು ಕಡಿಮೆ ಮಾಡಲು ಪರಿಸರವನ್ನು ಕಾಪಾಡಬೇಕಿದೆ. ಪ್ರತಿಯೊಬ್ಬರೂ ಸಸಿಗಳನ್ನು ನೆಟ್ಟು ಪೋಷಿಸಿ ಪರಿಸರ ಸಂರಕ್ಷಿಸಬೇಕು ಎಂದು ಕರೆ ನೀಡಿದರು.

ಪರಿಸರ ಸಂರಕ್ಷಣೆಗೆ ಶಿಕ್ಷಕರು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಿ,ಪರಿಸರ ಜಾಗೃತಿ ಮೂಡಿಸಬೇಕು ಎಂದರು. ಬಿಬಿಎಂಪಿಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಬಿ.ಜಿ.ಎಲ್.ಸ್ವಾಮಿ, ಕೃಷಿ ವಿವಿ ಶಿಕ್ಷಣ ನಿರ್ದೇಶಕ ಡಾ.ಕೆ.ಸಿ.ನಾರಾಯಣ ಸ್ವಾಮಿ ಹಾಜರಿದ್ದರು.

ಕೃಷಿ ವಿವಿ ಆವರಣದಲ್ಲಿ ಪರಿಸರ ದಿನಾಚರಣೆ

ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ಅರಣ್ಯ ಹಾಗೂ ಪರಿಸರ ವಿಜ್ಞಾನ ವಿಭಾಗ ಮತ್ತು ಹೆಬ್ಬಾಳದ ಯುಎಎಸ್ ಕ್ಯಾಂಪಸ್ ಶಾಲೆಯ ಸಂಯುಕ್ತ ಆಶ್ರಯದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಬೆಂಗಳೂರು ಕೃಷಿ ವಿವಿ ಕುಲಪತಿ ಡಾ. ಎಸ್.ವಿ.ಸುರೇಶ ಅವರು ಗಿಡ ನೆಡುವುದರ ಮೂಲಕ ಪರಿಸರ ದಿನಾಚರಣೆಗೆ ಚಾಲನೆ ನೀಡಿದರು. ಈ ವೇಳೆ ಮಾತನಾಡಿದ ಅವರು, ''ಹವಾಮಾನ ವೈಪರೀತ್ಯವನ್ನು ತಪ್ಪಿಸಲು ಪರಿಸರವನ್ನು ಕಾಪಾಡಿ, ಉಳಿಸಿಕೊಂಡು ಹೋಗುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಬೇಕು,'' ಎಂದು ಮನವಿ ಮಾಡಿದರು.

VijayaKannada Pg.04

Heatwave: Pricey betel leaves taste bitter for paan lovers

Yashaswini.Sri@timesgroup.com

Bengaluru: The city's fondness for paan is evident in its diverse array of flavors and tastes. Whether it's Maghai, Mishti, Calcutta or a playful chocolate variant, enthusiasts have access to a wide range of options. However, their beloved paan has seen a surge in prices lately.

Paan vendors told **TOI** they have already hiked prices by Rs 5-10 per piece and are contemplating another increase in the near future depending on consumer feedback.

The rise has been attributed to a jump in the cost of betel leaves — the key ingredient for making paan — by 125 per cent in the last two weeks.

Paan sellers said they had no option but to increase prices in the backdrop of a spike in input costs.

Paan consumption has increased over the years across the city, given its cosmopolitan outlook and interest in gastronomy.

Saran Kumar, an 18-year-old student from Koramangala, loves to eat paan after a heavy, hearty lunch. "With so many flavours to try, paan has become an integral part of life. The blend of flavours, the familiar ritual of chewing ... it brings me closer to my roots, to moments shared with loved ones," said Saran.

But Saran isn't the only one who feels this way about paan. According to Shilpa Shankar, owner of Maghai paan shop in Shantinagar, an average of 100 customers visit his store daily. "I get a lot of regular customers who love to indulge in their favourite kind of paan," said Shankar. Many like him defend the upward revision of paan prices. "Not just the cost of betel leaves, the price of everything else has gone up drastically. The rentals for the small spaces that house paan shops have also increased, as also the hafta paid to cops and local goons. It is high time that paan prices went up too," said Bholanath, a paan seller operating in Koramangala.

TOI

PRICES UP BY ₹5-10 PER PIECE

A paan, which would usually retail at Rs 20, now costs up to Rs 35. "Betel leaf has become costlier than ever, so we (vendors) are forced to increase the prices of paan," added Shankar.

Shivam S, owner of Namaste Paan Point, Seshadripuram, told **TOI** there has been an increase of Rs 250 per kg of betel leaves.

"Initially, we decided not to increase prices to maintain consistency, but it is difficult to run our business. In fact, we plan to further increase rates in the upcoming months if the input costs don't come down," Shivam added.

Explaining the reasons for the sudden surge in prices, Kadire Gowda, joint director, department of horticulture, told **TOI**, "Karnataka has 3173 hectares for betel leaf production, which is vastly concentrated in Davanagere. We are usually self-sufficient, and the production is enough for local consumption. Normally, a betel leaf would cost you around 50 paise. Now, because of drought and recent heatwave, *there has been a drastic drop in production. Now, a betel leaf costs around Rs 2.*"

Times Of India Pg.03

ಹರ್ಬೇರಿಯಂ ಶೀಟ್‌ನಲ್ಲಿ ಪ್ರತಿ ಸಸ್ಯದ ಮಾಹಿತಿ ಸಂಗ್ರಹ | ಡಿಜಿಟಲೀಕರಣ ಬಳಿಕ ಕ್ಯೂಆರ್ ಕೋಡ್ ಮೂಲಕ ವೀಕ್ಷಣೆಗೆ ಅವಕಾಶ

ಲಾಲ್‌ಬಾಗ್ ಸಸ್ಯ ವೈವಿಧ್ಯಕ್ಕೆ ಡಿಜಿಟಲ್ ರೂಪ

■ **ರಾಯಸಾಬ್ ಅನ್ಸಾರಿ** ಬೆಂಗಳೂರು
c-rayasab.anasari@timesgroup.com

ತೋಟಗಾರಿಕಾ ಇಲಾಖೆಯು ಲಾಲ್‌ಬಾಗ್‌ನ ಸಾವಿರಾರು ಸಸ್ಯ ಪ್ರಭೇದಗಳಿಗೆ ಡಿಜಿಟಲ್ ದಾಖಲಾತಿ ರೂಪ ನೀಡುವ ಯೋಜನೆಗೆ ಚಾಲನೆ ನೀಡಿದೆ.

ಜಿಪಿಎಸ್ ಆಧಾರಿತ ಛಾಯಾಚಿತ್ರ ಸಂಗ್ರಹ

ಲಾಲ್‌ಬಾಗ್‌ನಲ್ಲಿ 3 ಸಾವಿರಕ್ಕೂ ಹೆಚ್ಚು ಜಾತಿಯ ಸಸ್ಯಗಳಿವೆ. ಅವುಗಳ ಎಲ್ಲ ಮಾಹಿತಿಯ ದಾಖಲೆ ತೋಟಗಾರಿಕೆ ಇಲಾಖೆಯಲ್ಲಿ ಇಲ್ಲ, ಸಂರಕ್ಷಣೆ ಹಾಗೂ ವೈಜ್ಞಾನಿಕ ಅಧ್ಯಯನಕ್ಕೆ ನೆರವಾಗಲು ಹರ್ಬೇರಿಯಂ (ಸಸ್ಯದ ವಿವಿಧ ಭಾಗಗಳನ್ನು ಒಣಗಿಸಿ ಕಾಗದದಲ್ಲಿ ಅಂಟಿಸಿಡುವುದು) ಹಾಗೂ ಡಿಜಿಟಲ್ ರೂಪದಲ್ಲಿ ಸಂಗ್ರಹಿಸಲು ಉದ್ದೇಶಿಸಲಾಗಿದೆ.

ಪ್ರತಿ ಜಾತಿಯ ಸಸ್ಯಗಳ ಎಲೆಗಳು, ತೊಗಟೆ, ಹೂವು, ಕಾಯಿಯನ್ನು ಎ-3 ಸೈಜಿನ ಹರ್ಬೇರಿಯಂ ಶೀಟ್‌ನಲ್ಲಿ ಅಂಟಿಸಿ, ಅವುಗಳಿಗೆ ಹೊಲಿಗೆ ಹಾಕಲಾಗುತ್ತದೆ. ಒಂದು ಹರ್ಬೇರಿಯಂ ಶೀಟ್ ಸಿದ್ಧವಾಗಲು 15-20 ದಿನ ಬೇಕಾಗುತ್ತದೆ. ಪ್ರತಿ ಸಸ್ಯದ ಮೂಲ ಹೆಸರು, ಅದರ ಮೂಲ ಸ್ಥಾನ, ಬೆಳವಣಿಗೆ, ಬೆಳೆಯುವ ಹವಾಗುಣ, ಹೂವು-ಹಣ್ಣು ಮತ್ತು ಎಲೆಗಳು ಬಿಡುವ ಸಮಯ, ಅದರ ವೈಜ್ಞಾನಿಕ ಹೆಸರು, ಉಪಯುಕ್ತತೆ, ವಯಸ್ಸು ಸಹಿತ ಎಲ್ಲ ಮಾಹಿತಿಯನ್ನು ಹರ್ಬೇರಿಯಂ ಶೀಟ್‌ನಲ್ಲಿ ಕ್ರಮ ಸಂಖ್ಯೆಗೆ ಅನುಗುಣವಾಗಿ ಜೋಡಿಸಿಡಲಾಗುತ್ತದೆ. ಇದಲ್ಲದೆ, ಆ ಎಲ್ಲ ಸಸ್ಯಗಳ ಜಿಪಿಎಸ್ ಆಧಾರಿತ ಛಾಯಾಚಿತ್ರಗಳನ್ನು ಸಂಗ್ರಹಿಸಿಡಲಾಗುತ್ತಿದೆ. ಒಂದು ವರ್ಷದಿಂದ ನಿರಂತರವಾಗಿರುವ ಈ ಕಾರ್ಯ ಪೂರ್ಣಗೊಳ್ಳಲು ಇನ್ನೂ ಒಂದೂವರೆ ವರ್ಷ ತಗಲುತ್ತದೆ ಎಂದು ತೋಟಗಾರಿಕೆ ಇಲಾಖೆ ಅಧಿಕಾರಿಗಳು ತಿಳಿಸಿದರು.

"ದಾಖಲಾತಿ ಕಾರ್ಯ ಪೂರ್ಣವಾದ ನಂತರ 'ಪ್ಲಾಂಟ್ ವೆಲ್ತ್ ಆಫ್ ಲಾಲ್‌ಬಾಗ್' ಎಂಬ ಪುಸ್ತಕ ಮಾಡಲಾಗುವುದು. ಕ್ಯೂಆರ್ ಕೋಡ್ ಮೂಲಕ ಈ ಪುಸ್ತಕದ ಸಂಪೂರ್ಣ ವಿವರ ಲಭ್ಯವಾಗುವಂತೆ ಮಾಡಲಾಗುವುದು. ಅಳಿವಿನಂಚಿನಲ್ಲಿರುವ ಸಸ್ಯ ಪ್ರಭೇದಗಳನ್ನು ಸಂರಕ್ಷಿಸಲು ಹಾಗೂ ಜಗತ್ತಿನ ಪ್ರಮುಖ ಸಸ್ಯೋದ್ಯಾನಗಳ ಜತೆ ಸಸ್ಯ ಜಾತಿಗಳ ವಿನಿಮಯ ನಡೆಸಲು ಡಿಜಿಟಲೀಕರಣ ಯೋಜನೆ ನೆರವಾಗಲಿದೆ. ಸಸ್ಯಗಳ ಕುರಿತು ಅಧ್ಯಯನ ಮಾಡುವ ವಿದ್ಯಾರ್ಥಿಗಳು, ಜೀವ ವೈವಿಧ್ಯ ಅಧ್ಯಯನಕಾರರು, ಗಿಡ-ಮರಗಳ ಕುರಿತ ಆಸಕ್ತಿ ಹೊಂದಿದ ಎಲ್ಲರಿಗೂ ವೈಜ್ಞಾನಿಕ ಮಾಹಿತಿ ಸಿಗಲಿದೆ. ಪುಸ್ತಕ ಮಾರಾಟದಿಂದ ಆದಾಯ ಕೂಡ ಗಳಿಸಬಹುದು," ಎಂದು ಎಂ. ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಜಗದೀಶ್ ತಿಳಿಸಿದರು.

ವೆಚ್ಚ ಎಷ್ಟು?

ಮಾಹಿತಿ ಸಂಗ್ರಹಕ್ಕೆ ಹರ್ಬೇರಿಯಂ ಶೀಟು, ರ್‍ಯಾಕ್ ಸೇರಿದಂತೆ ವಿವಿಧ ಬಗೆಯ ಸಾಮಗ್ರಿಗಳು ಬೇಕಾಗುತ್ತವೆ. ಈ ಕೆಲಸದಲ್ಲಿ 15 ಮಂದಿ ತೊಡಗಿಸಿಕೊಂಡಿದ್ದಾರೆ. ಸಸ್ಯ ಸಂಪತ್ತಿನ ಹರ್ಬೇರಿಯಂ ಹಾಗೂ ಡಿಜಿಟಲೀಕರಣ ಯೋಜನೆ ಪೂರ್ಣಗೊಳ್ಳಲು ಕನಿಷ್ಠ 25 ಲಕ್ಷ ರೂ. ವೆಚ್ಚವಾಗಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಈಗಾಗಲೇ 900 ಸಸ್ಯ ಪ್ರಭೇದದ ಮಾಹಿತಿ ಸಿದ್ಧವಾಗಿದೆ. ಇನ್ನೊಂದು ವರ್ಷದಲ್ಲಿ ದಾಖಲೆ ಪ್ರಕ್ರಿಯೆ ಪೂರ್ಣಗೊಳ್ಳಲಿದೆ.

-ಡಾ. ಎಂ. ಜಗದೀಶ್ ಜಂಟಿ ನಿರ್ದೇಶಕ, ತೋಟಗಾರಿಕೆ ಇಲಾಖೆ

Vijaya Kannada Pg.04

Indian Council of Agricultural Research
National Agricultural Science Fund (NASF)
Krishi Anusandhan Bhavan-I, Pusa New Delhi-110 012

INVITATION FOR RESEARCH PRE-PROPOSALS FOR FUNDING BY ICAR-NASF

The Indian Council of Agricultural Research invites Pre-Proposals for projects on research proposals on basic and strategic research in the frontier areas of sciences that are relevant to agriculture (including livestock and fishery sciences) in the following major strategic priority areas. The projects would be considered and funded largely in a network mode in major theme areas. The specific areas under each major area are listed in the website: **http://www.icar.org.in/nasf/index.html** or **https://nasf.icar.gov.in/ Strategic Areas:**

(I) Biotechnology, genomics, metabolomics and allele mining in plants, animals and fisheries; (ii) Abiotic and biotic stresses and, quality traits in plants, animals and fisheries; (iii) Precision agriculture and management of natural resources; and application of sensors in crops, animals and Fisheries; (iv) Nanotechnology in Agriculture; (v) Farm Mechanization and energy; (vi) Social Sciences and policy in agriculture and allied areas.

SUBMISSION OF PRE-PROPOSAL: Pre-Proposal must be submitted through **On-line Mode** only at the website: **https://nasf.icar.gov.in/**. Pre-proposals in physical and/or any other form will not be entertained and shall be summarily rejected. (1) Submission of online Pre-proposals starts on **10 June, 2024 at 10:00 hrs.** (2) Last date and time for submission of online Pre-proposals is **09 July, 2024, 17:30 hrs.** (3) The link will automatically get disabled after the closing date and time. Thereafter, no request will be entertained. (4) For further details and submission guidelines of ICAR-NASF please see the website given above.

Assistant Director General (NASF)

CBC 01302/12/0001/2425